# ಸಲಾಂ ಮುಂಬೈ! ಲವ್ ಯೂ ಮುಂಬೈ!

ಮುಂಬಯಿಯ ಮಲ್ಬಾರ್ ಹಿಲ್ಸ್‌ನ ನಂಬರ್ ಒನ್ ಶ್ರೀಮಂತರಲ್ಲಿ ಒಬ್ಬನಾದ ಮಫತ್ಲಾಲ್ ಗುನ್ನಾಲಾಲನಿಗೆ ಎಚ್ಚರವಾದಾಗ ರಾತ್ರಿ ಒಂದೂವರೆ ಗಂಟೆಯಾಗಿತ್ತು. ಮಫತ್ಲಾಲ್ ಗುನ್ನಾಲಾಲನಿಗೆ ಜುಹೂ ಮತ್ತು ಬಾಂದ್ರಾಗಳಲ್ಲೂ ತಲಾ ಹತ್ತತ್ತು ಸಾವಿರ ಚದರಡಿಯ ಎರಡು ಸುಸಜ್ಜಿತ ಐಷಾರಾಮಿ ಭವ್ಯ ಬಂಗಲೆಗಳಿವೆ. ಆದರೆ ಗುನ್ನಾಲಾಲನಿಗೆ ಈ ಮನೆಯಲ್ಲಿ ಇರುವಾಗ ಸಿಗುವ ಸುಖ, ಸಂತೋಷ, ತೃಪ್ತಿ, ನೆಮ್ಮದಿಗಳು ಬೇರೆಲ್ಲೂ ಸಿಗುವುದಿಲ್ಲ. ಎಪ್ಪತ್ತನಾಲ್ಕು ವರ್ಷ ವಯಸ್ಸಿನಲ್ಲೂ ಮಫತ್ಲಾಲ್ ಗುನ್ನಾಲಾಲ್ ಗಟ್ಟಿಮುಟ್ಟಾಗಿಯೇ ಇದ್ದಾನೆ. ಈಗಲೂ ಮೂರು ಹೊತ್ತೂ ತಲಾ ಮೂರು ಮೂರು ಚಪಾತಿಗಳನ್ನು ಆಲೂ ಬಾಜಿಯೊಂದಿಗೆ ಸಲೀಸಾಗಿ ತಿನ್ನುತ್ತಾನಲ್ಲದೆ ನೂರು ನೂರು ಗ್ರಾಂ ಮೊಸರನ್ನು ಸಕ್ಕರೆ ಬೆರೆಸಿ ಆಸ್ವಾದಿಸುತ್ತಾನೆ. ವಾರಕ್ಕೆ ಎರಡು ದಿನ ಐದೈದು ಗುಲಾಬ್ ಜಾಮೂನು ಸವಿಯುತ್ತಾನೆ ಮತ್ತು ಪ್ರತಿದಿನ ಸುಮಾರು ಹತ್ತರಿಂದ ಹದಿನೈದು ಸಾದಾ ಪಾನ್ ಅಗಿಯುತ್ತಾನೆ. ಶುಗರ್, ಬಿಪಿ, ಹಾರ್ಟ್ ವೀಕ್ ಮುಂತಾದ ಯಾವ ಘನಂದಾರಿ ಕಾಯಿಲೆಗಳೂ ಮಫತ್ಲಾಲ್ ಗುನ್ನಾಲಾಲನ ಬಳಿ ಎಡತಾಕಿಲ್ಲ.

ಹದಿನೆಂಟು ವರ್ಷ ವಯಸ್ಸಿಗೇ ಸತಾರಾದ ಚೊರಗೆವಾಡಿ ಎಂಬ ಪುಟ್ಟ ಹಳ್ಳಿಯಿಂದ ಮನೆಯಲ್ಲಿ ಸಣ್ಣ ಗಲಾಟೆ ಮಾಡಿಕೊಂಡು ತಂದೆ ತಾಯಿಗೂ ಹೇಳದೆ ಮುಂಬಯಿಗೆ ಓಡಿ ಬಂದ ಮಫತ್ಲಾಲ್ ಗುನ್ನಾಲಾಲ್ ಕಾಟನ್ ಮಿಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡು ಧಾರಾವಿ ಕೊಳಗೇರಿಯ ಸಣ್ಣ ಚಾಲ್‌ನಲ್ಲಿ ಇನ್ನೊಬ್ಬ ಸಹೋದ್ಯೋಗಿಯೊಂದಿಗೆ ಬದುಕು ಶುರು ಮಾಡಿದ್ದ. ಸತಾರಾದ ಚೊರಗೆವಾಡಿ ಗ್ರಾಮಕ್ಕೆ ಗುನ್ನಾಲಾಲನ ತಾತ ರಾಜಸ್ಥಾನದ ಜೈಪುರದಿಂದ ಬಂದು ಸಣ್ಣ ಗಿರವಿ ಅಂಗಡಿ ಇಟ್ಟುಕೊಂಡು ಬದುಕು ಶುರು ಮಾಡಿದ್ದನಂತೆ. ಗುನ್ನಾಲಾಲನ ತಂದೆ ಬನ್ಸಿಲಾಲ್ ಅದೇ ವೃತ್ತಿಯನ್ನು ಮುಂದುವರೆಸಿದ್ದನಂತೆ. ವ್ಯಾಪಾರ ಹೊಟ್ಟೆ ಬಟ್ಟೆಗೆ ಮಾತ್ರ ಸಾಕಾಗುತ್ತಿತ್ತು. ಹಾಗಾಗಿ ಗುನ್ನಾಲಾಲನನ್ನು ಚನ್ನಾಗಿ ಓದಿಸಿ ಒಂದು ಒಳ್ಳೆಯ ಗೌರ್ಮೆಂಟ್ ನೌಕರಿಗೆ ಸೇರಿಸಬೇಕೆಂಬುದು ಅವನ ತಂದೆಯ ಬಲವಾದ ಬಯಕೆಯಾಗಿತ್ತು. ಗುನ್ನಾಲಾಲ್ ಸಖತ್ ಬುದ್ಧಿವಂತನಾಗಿದ್ದರೂ ಸ್ಕೂಲಿಗೆ ಮಾತ್ರ ಸರಿಯಾಗಿ ಹೋಗುತ್ತಿರಲಿಲ್ಲ. ಏಳನೆಯ ಕ್ಲಾಸಿನಲ್ಲಿ ಒಂದು ವರ್ಷ ಫೇಲಾಗಿ ಹೈಸ್ಕೂಲ್ ಎರಡನೆಯ ವರ್ಷದಲ್ಲೂ ಒಮ್ಮೆ ನಪಾಸಾಗಿದ್ದ. ಶಾಲೆಯ ಹಿಂದೆ ಗೆಳೆಯರೊಂದಿಗೆ ಬೀಡಿ ಸೇದುತ್ತಾ ಅಂದರ್ ಬಾಹರ್ ಎಲೆಯಾಟ ಆಡುವಾಗ ಗುನ್ನಾಲಾಲ್ ಹೆಡ್ ಮಾಸ್ತರಿಗೆ ಸಿಕ್ಕಿಬಿದ್ದಿದ್ದ. ತಂದೆ ಬನ್ಸಿಲಾಲನಿಗೆ ಮಗನ ವಿಷಯ ಗೊತ್ತಾಗಿ ಕೆಂಡಾಮಂಡಲನಾಗಿದ್ದನಲ್ಲದೆ ಬೆಲ್ಟಿನಿಂದ ಮನಬಂದಂತೆ ಹೊಡೆದಿದ್ದ. ಅಷ್ಟೇ, ಮಾರನೆಯ ಬೆಳಿಗ್ಗೆಯೇ ಹೇಳದೆ ಕೇಳದೆ ಮನೆ ಬಿಟ್ಟಿದ್ದ ಗುನ್ನಾಲಾಲ್ ರೈಲು ಹತ್ತಿ ಹೇಗೋ ಬಂದು ಮುಂಬಯಿಯ ಮಡಿಲಿಗೆ ಬಿದ್ದುಬಿಟ್ಟಿದ್ದ.

ಕೇಳಬೇಕೆ? ಮುಂಬಯಿ ಲಕ್ಷಾಂತರ ಜನರನ್ನು ತನ್ನ ಹೊಟ್ಟೆಗೆ ಹಾಕಿಕೊಳ್ಳುವಂತೆ ಗುನ್ನಾಲಾಲನನ್ನೂ ಪ್ರೀತಿಯಿಂದ ಹಾಕಿಕೊಂಡಿತ್ತು. ಮಿಲ್ ಸೇರಿದ ಎರಡು ವರ್ಷದಲ್ಲೇ ತನ್ನ ವಿಶಿಷ್ಟ ಮಾತು, ಮ್ಯಾನರಿಸಂ ಮತ್ತು ಕೆಲಸದಲ್ಲಿನ ಕಮಿಟ್‌ಮೆಂಟಿನಿಂದಾಗಿ ಗುನ್ನಾಲಾಲ್ ಪರ್ಚೇಸ್ ಮತ್ತು ಸೇಲ್ಸ್ ಸೆಕ್ಷನ್ನಿನ ಮ್ಯಾನೇಜರುಗಳ ವಿಶ್ವಾಸಕ್ಕೆ ಪಾತ್ರನಾಗಿ ಅಸಿಸ್ಟೆಂಟ್ ಮ್ಯಾನೇಜರ್ ಜಾಗಕ್ಕೆ ಬಡ್ತಿ ಗಿಟ್ಟಿಸಿಕೊಂಡಿದ್ದ. ಪರ್ಚೇಸ್, ಸೇಲ್ಸ್ ವಿಭಾಗದ ಒಳ ಹೊರಗುಗಳ ಒಳಮರ್ಮಗಳನ್ನು ಅತಿ ವೇಗವಾಗಿ ಕರಗತ ಮಾಡಿಕೊಂಡ ಗುನ್ನಾಲಾಲ್ ಮೂರೇ ಮೂರು ವರ್ಷದ ಅವಧಿಯಲ್ಲಿ ಅದೃಷ್ಟದ ಮಡಿಲಿಗೂ ಬಿದ್ದು ಧಾರಾವಿಯ ಚಾಲನ್ನು ಬಿಟ್ಟು ಮಾತುಂಗದ ರೂಮೊಂದಕ್ಕೆ ಶಿಫ್ಟ್ ಆಗಿದ್ದ. ಅಷ್ಟೇ, ಇವೊತ್ತು ಗುನ್ನಾಲಾಲ್ ಮೂರು ಟೆಕ್ಸ್‌ಟೈಲ್ ಫ್ಯಾಕ್ಟರಿಗಳ ಓನರ್ ಆಗಿರುವನಲ್ಲದೆ ಅವನ ರೆಡಿಮೇಡ್ ರಫ್ತು ಬಿಸಿನೆಸ್ ಟರ್ನ್ ಓವರ್ ವರ್ಷಕ್ಕೆ ಮುನ್ನೂರು ನಾನ್ನೂರು ಕೋಟಿಗಳಷ್ಟಾಗುತ್ತದೆ. ಮಫತ್ಲಾಲ್ ಕಾಟನ್ ಮಿಲ್ಲಿಗೆ ಕೆಲಸಕ್ಕೆ ಸೇರಿ ಏಳೆಂಟು ವರ್ಷಗಳಲ್ಲೇ ಅಗಾಧವಾಗಿ ಬೆಳೆದು ಸ್ವಂತ ಬಿಸಿನೆಸ್ ಶುರು ಮಾಡಿದಾಗ ಗುನ್ನಾಲಾಲ್ ತನ್ನ ಹೆಸರಿನ ಮುಂದೆ ಮಫತ್ಲಾಲ್ ಸೇರಿಸಿಕೊಂಡ. ಆದರೆ ತನ್ನ ಬಿಸಿನೆಸ್ಸಿಗೆ 'ಮಫತ್ಲಾಲ್' ಎಂದು ಹೆಸರಿಡಲು ಕಾನೂನು ಕಟ್ಟಲೆಗಳು ಅಡ್ಡ ಬಂದಿದ್ದರಿಂದ ತನ್ನ ಮಗ ಭವರ್ ಲಾಲನ ಹೆಸರಿನಲ್ಲಿ 'ಭವರ್ ಬಿಸಿನೆಸ್ ಟವರ್' ಮತ್ತು ತನ್ನ ಹೆಸರಿನಲ್ಲಿ 'ಗುನ್ನಾಲಾಲ್ ಎಕ್ಸ್‌ಪೋರ್ಟ್ಸ್' ಎಂಬ ಕಂಪನಿಗಳನ್ನು ಸ್ಥಾಪಿಸುವುದರ ಮೂಲಕ ಅಪಾರ ಲಾಭವನ್ನು ಗಳಿಸಿದ್ದ. ಈ ಎರಡು ವರ್ಷಗಳ ಹಿಂದೆ ಮೊಮ್ಮಗ ಆಸ್ಕರ್ ವೈಲ್ಡನ ಹೆಸರಿನಲ್ಲಿ 'ಆಸ್ಕರ್ ಟವರ್ಸ್' ಎಂಬ ಎರಡು ಜೋಡಿ ಬಿಸಿನೆಸ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿ ಅವುಗಳಿಂದ ಕೋಟಿಗಟ್ಟಲೆ ಬಾಡಿಗೆಯನ್ನು ಪಡೆಯುತ್ತಿದ್ದಾನೆ.

ತನ್ನ ಫ್ಯಾಕ್ಟರಿ ಮತ್ತು ಬಿಸಿನೆಸ್ಸಿನ ಕಾರ್ಮಿಕರನ್ನು ತುಂಬಾ ಚನ್ನಾಗಿ ನೋಡಿಕೊಳ್ಳುತ್ತಾನಲ್ಲದೆ ದಾನ–ಧರ್ಮಗಳಲ್ಲಿ ನಿಸ್ಸೀಮನಾಗಿದ್ದಾನೆ. ತಾನು ಹುಟ್ಟಿದ ಹಳ್ಳಿಯನ್ನಲ್ಲದೆ ಸುತ್ತಮುತ್ತಲಿನ ಏಳೆಂಟು ಹಳ್ಳಿಗಳನ್ನು ದತ್ತು ತೆಗೆದುಕೊಂಡು ಎಲ್ಲಾ ರೀತಿಯಲ್ಲೂ ಅಭಿವೃದ್ಧಿಪಡಿಸಿರುವುದರಿಂದ ಅಲ್ಲಿನ ಜನ ಮಫತ್ಲಾಲ್ ಗುನ್ನಾಲಾಲನನ್ನು ಭಗವಾನ್ ಮಫತ್ಲಾಲ್ ಗುನ್ನಾಲಾಲ್ ಎಂದೇ ಸಂಬೋಧಿಸುತ್ತಾರೆ. ವರ್ಷಕ್ಕೊಮ್ಮೆ ಗಣೇಶ ಚತುರ್ಥಿಗೆ ಮುಂಬಾದೇವಿ ಮತ್ತು ಶ್ರೀ ಸಿದ್ಧಿವಿನಾಯಕ ದೇವಸ್ಥಾನಗಳಿಗೆ ತಲಾ ಹತ್ತತ್ತು ಲಕ್ಷ ಡೊನೇಷನ್ ನೀಡುತ್ತಾನೆ. ಅದನ್ನು ಅನ್ನ ಸಂತರ್ಪಣೆಗೆ ಬಳಸಲಾಗುತ್ತದೆ. ಮುಂಬಯಿಗೆ ಬಣ್ಣದ ಕನಸುಗಳನ್ನು ಕಟ್ಟಿಕೊಂಡು ಬರುವವರೇ ಹೆಚ್ಚು. ಆದರೆ ಅಂಥವರಲ್ಲಿ ಕನಸುಗಳು ನನಸಾಗದೆ ಬರಿ ಕನಸುಗಳಲ್ಲೇ ಮುಳುಗೆದ್ದು ಸಾಯುವವರೇ ಅತಿ ಹೆಚ್ಚು. ಆದರೆ ಯಾವ ಕನಸನ್ನೂ ಹೊತ್ತು ಬರದ

